ಸಾಕ್ಷಿಯನ್ನು ದಿಃ 16-09-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಎಫ್ ಡಿ ವಕೀಲರಿಂದ (ವಾದಿ ಪರವಾಗಿ)**

ನನಗೆ ಈಗ 63 ವರ್ಷ ವಯಸ್ಸಾಗಿದೆ. ನಾನು ಕನ್ನಡ 4 ನೇ ತರಗತಿವರೆಗೆ ಓದಿದ್ದೇನೆ. ನಾನು ಊರಲ್ಲಿ ಹಿರಿಯತನ ಮಾಡುತ್ತೇನೆ ಎಂದರೆ ಸರಿಯಲ್ಲ. ಮೃತ ಪಾರ್ವತೆವ್ವ ಚೆನ್ನಾಪೂರ ಇವರ ಕುಟುಂಬಕ್ಕೆ 11 ಎಕರೆ ಜಮೀನು ಇದ್ದು, ಉಳಿದ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ. ಸದರಿ ಪಾರ್ವತೆವ್ವನಿಗೆ ಎಷ್ಟು ಜನ ಮಕ್ಕಳು ಗೊತ್ತಿಲ್ಲ. ಮುಖ್ಯ ವಿಚಾರಣೆಯನ್ನು ನಾನೇ ಹೇಳಿ ಬರೆಯಿಸಿದ್ದೇನೆ. ಮೃತ ಪಾರ್ವತೆವ್ವನಿಗೆ ವಾದಿ ನಂ.1 ರಿಂದ 4 ಹಾಗೂ ಮೃತ ಬಸವಣ್ಣೆಪ್ಪ ಹೀಗೆ 5 ಜನ ಮಕ್ಕಳು ಎಂದರೆ ನನಗೆ ಬಸವಣ್ಣೆಪ್ಪ ಮಾತ್ರ ಗೊತ್ತು ಉಳಿದವರ ಬಗ್ಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ವಾದಿಯರ ಹೆಸರು ಬರೆಯಿಸಿಲ್ಲ. ವಾದಿಯರ ಹೆಸರನ್ನು ಮುಖ್ಯ ವಿಚಾರಣೆಯಲ್ಲಿ ಬರೆಯಿಸಿದ್ದರೂ ಸಹ ಬರೆಯಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಬಸವಣ್ಣೆಪ್ಪನಿಗೆ ಹಕ್ಕು ಬಿಟ್ಟ ಬಗ್ಗೆ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹಕ್ಕುಬಿಟ್ಟ ಪತ್ರದ ಬಗ್ಗೆ ಬರೆಯಿಸಿಲ್ಲ. ನಾನು ದಾವಾ ಜಮೀನು ಖರೀದಿಸುವ ಮೊದಲು ಆ ಬಗ್ಗೆ ಯಾವುದೇ ಸಾರ್ವಜನಿಕ ನೊಟೀಸ ಅಥವಾ ಜಾಹೀರ ಪ್ರಕಟಣೆ ಹೊರಡಿಸಿಲ್ಲ. ಸಾಕ್ಷಿ ಮುಂದುವರೆದು ಬಸವಣ್ಣೆಪ್ಪನ ಚಿಕಿತ್ಸೆಗಾಗಿ ಹಣ ಅವಶ್ಯ ಇದ್ದ ಕಾರಣ ಅವರು ಜಮೀನು ಉತಾರೆ ತೋರಿಸಿ ಮಾರಾಟ ಮಾಡುವುದಾಗಿ ಹೇಳಿದ್ದರಿಂದ ನಾನು ಜಮೀನು ಖರೀದಿಸಿದ್ದೇನೆ ಎಂದು ಹೇಳುತ್ತಾರೆ. ಬಸವಣ್ಣೆಪ್ಪನಿಗೆ ಪ್ರಾಪಂಚಿಕ ಅಡಚಣೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಬಸವಣ್ಣೆಪ್ಪನಿಗೆ ಚಿಕಿತ್ಸೆ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಖರೀದಿಯ ಸಮಯದಲ್ಲಿ ವಾದಿಯರಿಗೆ ಆ ಬಗ್ಗೆ ಮಾಹಿತಿ ಇದ್ದರೂ ಸಹ ಅವರು ಬಂದು ತಕರಾರು ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ದಾವೆ ಹೂಡಿ

ನನಗೆ ಮಾನಸಿಕವಾಗಿ ಮತ್ತು ಆರ್ಥಿಕವಾಗಿ ದಕ್ಕೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು 2013-14 ರಲ್ಲಿ ಖರೀದಿಸಿದ್ದೇನೆ. ನಾನು ನನ್ನ ಖರೀದಿ ಪತ್ರ ವಾದಿಯರ ಹಕ್ಕಿನ ಮೇರೆಗೆ ಬಂಧನಕಾರಕ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.1 ರಿಂದ 4 ರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.